1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಸ್ಪೆ .ಸಿ. ಸಂಖ್ಯೆ 5080/2025**

ಫಿರ್ಯಾದಿಃ ರಾಜ್ಯದ ಪರವಾಗಿ ಕೊಳ್ಳೇಗಾಲ ಗ್ರಾಮಾಂತರ ಪೊಲೀಸರು

ವಿರುದ್ಧ

ಆರೋಪಿಃ ರಾಚಪ್ಪಾಜಿ
ಬಿನ್ ಮಸಣಶೆಟ್ಟಿ ಉರ್ಫ ಬುಕಾನ್,
31 ವರ್ಷ
ವಾಸಃ 4ನೇ ವಾರ್ಡ, ಮಸಣಶೆಟ್ಟರ ಬೀದಿ,
ಮಧುವನಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು.

**ಭಾರತೀಯ ನಾಗರಿಕ ಸುರಕ್ಷಾ ಸಂಹಿತ ಕಲಂ 351 ರಡಿಯಲ್ಲಿ ಆರೋಪಿತರ ಹೇಳಿಕೆ**

ಪ್ರಶ್ನೆಃ1: ಅಭಿಯೋಜನ ಪರ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ನೀವು ಕೇಳಿಸಿಕೊಂಡಿದ್ದೀರಾ?

ಉತ್ತರಃ

ಪ್ರಶ್ನೆಃ 2: ಫ್ರಾ.ಸಾಕ್ಷಿ-1 ಮಾದೇಶ್ ತಮ್ಮ ಸಾಕ್ಷ್ಯದಲ್ಲಿ ಚಾಸಾ 4 ಮೇಸ್ತ್ರಿ ಕೆಲಸ ಮಾಡುತ್ತಾರೆ. ಅವರು ಕೂಲಿ ಆಳುಗಳನ್ನು ಕರೆದುಕೊಂಡು ಹೋಗಿ ಕಟಾವು ಕೆಲಸ ಮಾಡಿಸುತ್ತಾರೆ. ಮೃತಳು ಚಾಸಾ 4 ರವರ ಜೊತೆ ಕೆಲಸಕ್ಕೆ ಹೋಗುತ್ತಿದ್ದಳು. ದಿಃ 16.12.2024 ರಂದು ಮೃತಳು ಚಾಸಾ 4 ರವರೊಂದಿಗೆ ಕಬ್ಬು ಕಟಾವು ಕೆಲಸಕ್ಕೆಂದು ಹೋಗಿದ್ದಳು. ಮಧುವನಹಳ್ಳಿ ಆಟೋ ಮಾದೇಶ ಎಂಬುವವರ ಗದ್ದೆಯಲ್ಲಿ ಕಬ್ಬು ಕಟಾವು ಕೆಲಸಕ್ಕೆ ಹೋಗಿದ್ದಳು. ಬೆಳಗ್ಗೆ 5.30 ಕ್ಕೆ ಮೃತಳು ಮನೆ ಬಿಟ್ಟು ಹೋಗಿದ್ದಳು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 3: ಫ್ರಾ.ಸಾಕ್ಷಿ-1 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಚಾಸಾ 4 ರವರು ತನಗೆ ದೂರವಾಣಿ ಕರೆ ಮಾಡಿ ತನ್ನ ಹೆಂಡತಿಗೆ ವಿದ್ಯುತ ಶಾಕ್ ಆಗಿದೆ ಆಕೆಯನ್ನು ಆಸ್ಪತ್ರೆಗೆ ದಾಖಲು ಮಾಡಿದ್ದೇವೆ, ಕಾಮಗೆರೆಗೆ ಬಾ ಎಂದು ಕರೆದರು. ತಾನು ಬೆಳಗ್ಗೆ 8.00 ಗಂಟೆಗೆ ಆಸ್ಪತ್ರೆಗೆ ಹೋಗಿ ನೋಡಿದೆ. ಅಲ್ಲಿ ತನ್ನ ಪತ್ನಿ ಮೃತಪಟ್ಟಿದ್ದಳು.

ತಾನು ಚಾಸಾ 4 ರವರನ್ನು ವಿಚಾರಿಸಿದಾಗ ತನ್ನ ಹೆಂಡತಿ ಮೂತ್ರವಿಸರ್ಜನೆಗೆಂದು ಹೋದಾಗ ಹೊಲದ ಬದಿಯಲ್ಲಿ ಅಳವಡಿಸಿದ್ದ ವಿದ್ಯುತ್ ಬೇಲಿಗೆ ತಗುಲಿ ವಿದ್ಯುತ್ ಶಾಕ್ ನಿಂದ ಮೃತಪಟ್ಟಿದ್ದಾಳೆ ಎಂದು ಗೊತ್ತಾಯಿತು. ತಾನು ಈ ಬಗ್ಗೆ ಪೋಲಿಸರಿಗೆ ದೂರು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 4: ಪ್ರಾ.ಸಾಕ್ಷಿ–2 ನಾಗಮ್ಮ ತಮ್ಮ ಸಾಕ್ಷ್ಯದಲ್ಲಿ ಮೃತ ಪವಿತ್ರ ತನ್ನ ಜೊತೆ ಕೆಲಸ ಮಾಡುತ್ತಿದ್ದಳು. ಚಾಸಾ 4 ತಮ್ಮ ಮೇಸ್ತ್ರಿ ಆಗಿದ್ದನು. ಚಾಸಾ 4 ನಮ್ಮೆಲ್ಲರನ್ನು ಕಬ್ಬು ಬೆಳೆಯ ಕಟಾವಿಗೆ ಕರೆದುಕೊಂಡು ಹೋಗುತ್ತಿದ್ದನು. ಮೃತ ಪವಿತ್ರಾ ಮೃತಪಟ್ಟ ದಿನ ಚಾಸಾ 17 ರವರ ಜಮೀನಿನಲ್ಲಿ ಕಬ್ಬು ಬೆಳೆಯ ಕಟಾವಿಗೆಂದು ಹೋಗಿದ್ದೆವು. ಸುಮಾರು 1 ವರ್ಷದ ಹಿಂದೆ ಪವಿತ್ರಾ ಮೃತಪಟ್ಟಿರುತ್ತಾಳೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 5: ಪ್ರಾ.ಸಾಕ್ಷಿ–2 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ದಿನ ಬೆಳಗ್ಗೆ 4.30 ಗಂಟೆಗೆ ಸ್ಥಳಕ್ಕೆ ಹೋಗಿರುತ್ತೇವೆ. ಬೆಳಗ್ಗೆ 5.30 ಗಂಟೆ ಸಮಯಕ್ಕೆ ಮೃತಳು, ತಾನು ಮತ್ತು ಚಾಸಾ 3 ರವರು ಶೌಚಾಲಯಕ್ಕೆಂದು ಹೋದೆವು. ಕೆಲಸ ಮಾಡುತ್ತಿದ್ದ ಸ್ಥಳದಿಂದ ಸ್ವಲ್ಪ ದೂರ ಹೋದೆವು. ಅಲ್ಲಿ ಹೊಲದ ತೇವರಿ ಇತ್ತು. ಹೆ ೊಲದ ಸುತ್ತಲೂ ತಂತಿ ಬೇಲಿ ಹಾಕಿದ್ದರು. ತಾನು ಬೇಲಿ ಹತ್ತಿರ ಹೋದಾಗ ತನಗೆ ಮೊದಲು ವಿದ್ಯುತ್ ಶಾಕ್ ಆಯಿತು. ತಾನು ಕಿರುಚಿಕೊಂಡು ಹಿಂದೆ ಬಂದೆ. ಮೃತ ಪವಿತ್ರಾಳು ಬೇಲಿ ಹತ್ತಿರ ಹೋಗಿದ್ದಳು. ಅವಳು ವಿದ್ಯುತ್ ಶಾಕ್ ನಿಂದ ಕಿರುಚಿಕೊಂಡು ಅಲ್ಲೇ ಬಿದ್ದಳು. ನಂತರ ಚಾಸಾ 4 ರಿಂದ 6 ರವರು ಸ್ಥಳಕ್ಕೆ ಬಂದರು. ನಂತರ ಮೃತಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ವೇಳೆಗೆ ಮೃತಳು ಮೃತಪಟ್ಟಿದ್ದಳು. ತಂತಿ ಬೇಲಿ ಹಾಕಿದ್ದ ಜಮೀನು ಆರೋಪಿಗೆ ಸೇರಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 6: ಪ್ರಾ.ಸಾಕ್ಷಿ–2 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮರುದಿನ ಪೋಲಿಸರು ಮೃತಳು ವಿದ್ಯುತ್ ಶಾಕ್ ನಿಂದ ಮೃತಪಟ್ಟ ಸ್ಥಳಕ್ಕೆ ಬಂದಿದ್ದರು. ತಾನು ಪೊಲೀಸರಿಗೆ ಸ್ಥಳ ತೋರಿಸಿದೆ. ಪೋಲೀಸರು ಸ್ಥಳದಲ್ಲಿ ಮಹಜರ್ ಬರೆದರು. ತಾನು ಮಹಜರಿಗೆ ಸಹಿ ಮಾಡಿರುತ್ತೇನೆ. ಪೊಲೀಸರು ಸ್ಥಳದಲ್ಲಿ

ಭಾವಚಿತ್ರಗಳನ್ನು ತೆಗೆದರು. ಪೊಲೀಸರು ಸ್ಥಳದಿಂದ 91 ಗೂಟಗಳನ್ನು, ವೈರ್ ಅನ್ನು ಅಮಾನತ್ತುಪಡಿಸಿಕೊಂಡರು. ಪೊಲೀಸರು ತನ್ನನ್ನು ವಿಚಾರಣೆ ಮಾಡಿರುತ್ತಾರೆ. ತಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 7: ಪ್ರಾ.ಸಾಕ್ಷಿ-3 ರಾಜಮ್ಮ ತಮ್ಮ ಸಾಕ್ಷ್ಯದಲ್ಲಿ ಮೃತ ಪವಿತ್ರಾ ತನ್ನ ಜೊತೆ ಕೆಲಸ ಮಾಡುತ್ತಿದ್ದಳು. ಚಾಸಾ 4 ತಮ್ಮ ಮೇಸ್ತ್ರಿ ಆಗಿದ್ದನು. ಚಾಸಾ 4 ತಮ್ಮೆಲ್ಲರನ್ನು ಕಬ್ಬು ಬೆಳೆಯ ಕಟಾವಿಗೆ ಕರೆದುಕೊಂಡು ಹೋಗುತ್ತಿದ್ದನು. ಮೃತ ಪವಿತ್ರಾ ಮೃತಪಟ್ಟ ದಿನ ಚಾಸಾ 17 ರವರ ಜಮೀನಿನಲ್ಲಿ ಕಬ್ಬು ಬೆಳೆಯ ಕಟಾವಿಗೆಂದು ಹೋಗಿದ್ದೆವು. ಸುಮಾರು 1 ವರ್ಷದ ಹಿಂದೆ ಪವಿತ್ರಾ ಮೃತಪಟ್ಟಿರುತ್ತಾಳೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 8: ಪ್ರಾ.ಸಾಕ್ಷಿ-3 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ದಿನ ಬೆಳಗ್ಗೆ 5.45 ಗಂಟೆಗೆ ಸ್ಥಳಕ್ಕೆ ಹೊಗಿರುತ್ತೇವೆ. ತಾನು ಮತ್ತು ಚಾಸಾ 2 ರವರು ಶೌಚಾಲಯಕ್ಕೆಂದು ಹೋದೆವು. ಕೆಲಸ ಮಾಡುತ್ತಿದ್ದ ಸ್ಥಳದಿಂದ ಸ್ವಲ್ಪ ದೂರು ಹೋದೆವು. ಅಲ್ಲಿ ಹೊಲದ ತೇವರಿ ಇತ್ತು. ಹೊಲದ ಸುತ್ತಲೂ ತಂತಿ ಬೇಲಿ ಹಾಕಿದ್ದರು. ಮೃತಳು ಬೇಲಿ ಸಮೀಪ ಹೋದಾಗ ಆಕೆಗೆ ವಿದ್ಯುತ್ ಶಾಕ್ ಹೊಡೆಯಿತು. ನಂತರ ಚಾಸಾ 2 ರವರಿಗೂ ವಿದ್ಯುತ್ ಶಾಕ್ ಹೊಡೆಯಿತು. ನಂತರ ಚಾಸಾ 4 ರಿಂದ 6 ರವರು ಸ್ಥಳಕ್ಕೆ ಬಂದರು. ನಂತರ ಮೃತಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಮೃತಳು ಮೃತಪಟ್ಟಿದ್ದಾಳೆ ಎಂದು ಹೇಳಿದರು. ತಂತಿ ಬೇಲಿ ಹಾಕಿದ್ದ ಜಮೀನು ಆರೋಪಿಗೆ ಸೇರಿತ್ತು, ತಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 9: ಪ್ರಾ.ಸಾಕ್ಷಿ-4 ನಿಂಗರಾಜು ತಮ್ಮ ಸಾಕ್ಷ್ಯದಲ್ಲಿ ಮೃತ ಪವಿತ್ರಾಳು ತನ್ನ ಜೊತೆ ಕೆಲಸ ಮಾಡುತ್ತಿದ್ದಳು. ತಾನು ಎಲ್ಲರನ್ನು ಕೆಲಸಕ್ಕೆಂದು ಕರೆದುಕೊಂಡು ಹೊಗುತ್ತಿದ್ದೆ. ಕಬ್ಬು ಬೆಳೆ ಕಟಾವಿಗೆಂದು ಕರೆದುಕೊಂಡು ಹೋಗುತ್ತಿದ್ದೆ. ಮೃತಳು ಮೃತಪಡುವ ದಿನ ಚಾಸಾ 17 ರವರ ಜಮೀನಿಗೆ ಕಬ್ಬು ಬೆಳೆಯ ಕಟಾವಿಗೆಂದು ಕರೆದುಕೊಂಡು ಹೋಗಿದ್ದೆ. ಆತ ಚಾಸಾ 18 ರವರ ಜಮೀನನ್ನು ಗುತ್ತಿಗೆಗೆ ಪಡೆದು ಕಬ್ಬು ಬೆಳೆ ಬೆಳೆದಿದ್ದನು. ಘಟನೆಗೆ ಹಿಂದಿನ ದಿನ ಮೇಲೆ ಹೇಳಿದವರನ್ನು ಕೆಲಸಕ್ಕೆಂದು ಕರೆದುಕೊಂಡು ಹೋಗಿದ್ದೆ.

ಆ ದಿನ ಜಮಿನೀನಲ್ಲಿ ಕಬ್ಬು ಬೆಳೆ ಕಟಾವನ್ನು ಮಾಡಿದ್ದರು. ಮರುದಿನ ಬೆಳಗ್ಗೆ 5.45–6.00 ಗಂಟೆ ಸಮಯದಲ್ಲಿ ಅವರನ್ನು ಸದರಿ ಜಮಿನಿಗೆ ಕೆಲಸಕ್ಕೆಂದು ಕರೆದುಕೊಂಡು ಹೋಗಿದ್ದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 10: ಫ್ರಾ.ಸಾಕ್ಷಿ–4 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಘಟನೆ ಆಗಿ ಸುಮಾರು 1 ವರ್ಷ ಆಗಿರುತ್ತದೆ. ಆ ದಿನ ತಾನು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆ. ಮೃತ ಪವಿತ್ರಾ, ಚಾಸಾ 2 ಮತ್ತು 3 ರವರು ಶೌಚಾಲಯಕ್ಕೆಂದು ದೂರ ಹೊಗಿದ್ದರು. ಅಲ್ಲಿ ಮೃತಳಿಗೆ ವಿದ್ಯುತ್ ಶಾಕ್ ಹೊಡೆದು ಕೆಳಕ್ಕೆ ಬಿದ್ದಳು. ಆಕೆಯನ್ನು ಚಾಸಾ 2 ಮುಟ್ಟಿದಾಗ ಆಕೆಗೂ ವಿದ್ಯುತ್ ಶಾಕ್ ಹೊಡೆದಿದ್ದು, ಆಕೆ ಕಿರುಚಿಕೊಂಡಳು. ತಾನು ಸ್ಥಳಕ್ಕೆ ಹೋಗಿ ನೋಡಿದೆ. ಆಗ ಬೆಳಗ್ಗೆ 6.00ಗಂಟೆ ಆಗಿತ್ತು. ಸದರಿ ಸ್ಥಳ ತಾವು ಕಟಾವು ಮಾಡುತ್ತಿದ್ದ ಕಬ್ಬು ಬೆಳೆ ಇದ್ದ ಜಮೀನು ಮತ್ತು ಮತ್ತೊಂದು ಜಮಿನಿನ ತೇವರಿ ಆಗಿದ್ದು, ಸದರಿ ಜಮೀನಿನಲ್ಲಿ ಜೋಳದ ಬೆಳೆ ಇತ್ತು. ಸದರಿ ಜೋಳದ ಬೆಳೆ ಸುತ್ತಲೂ ಗೂಟಗಳನ್ನು ನೆಟ್ಟಿ ತಂತಿಯನ್ನು ಸುತ್ತಲೂ ಸುತ್ತಲಾಗಿತ್ತು. ಶೌಚಾಲಯಕ್ಕೆ ಸದರಿ ಬೇಲಿ ಪಕ್ಕದಿಂದಲೇ ಹೋಗಬೇಕಾಗಿತ್ತು. ಜೋಳದ ಬೆಳೆ ಇದ್ದ ಮತ್ತು ಬೇಲಿ ಹಾಕಿದ್ದ ಸ್ಥಳ ಆರೋಪಿಗೆ ಸೇರಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 11: ಫ್ರಾ.ಸಾಕ್ಷಿ–4 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತಳನ್ನು ಮೊದಲು ಹೋಲಿ ಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಆಕೆ ಮೃತಪಟ್ಟಿದ್ದಾಳೆ ಎಂದು ಹೇಳಿದರು. ಈ ವಿಚಾರವನ್ನು ತಾನು ಚಾಸಾ 1 ರವರಿಗೆ ತಿಳಿಸಿದೆ. ತಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ತಾನು ನ್ಯಾಯಾಧಿಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 12: ಫ್ರಾ.ಸಾಕ್ಷಿ–5 ಮಂಟ್ಯಾ ತಮ್ಮ ಸಾಕ್ಷ್ಯದಲ್ಲಿ ಚಾಸಾ 2 ರಿಂದ 4, ಮೃತ ಪವಿತ್ರಾ, ಚಾಸಾ 6 ರಿಂದ 8 ಮತ್ತು ತಾನು ಎಲ್ಲಾರೂ ಒಟ್ಟಾಗಿ ಕಬ್ಬು ಕಟಾವು ಕೆಲಸ ಮಾಡುತ್ತಿದ್ದೆವು. ಆ ದಿನ ಚಾಸಾ 17 ರವರ ಜಮೀನಿಗೆ ಕಬ್ಬು ಕಟಾವು ಕೆಲಸಕ್ಕೆಂದು ಹೋಗಿದ್ದೆವು. ಬೆಳಗ್ಗೆ 5.45 ಕ್ಕೆ ಸ್ಥಳಕ್ಕೆ ಹೋಗಿದ್ದೆವು. ಸುಮಾರು 1 ವರ್ಷದ ಹಿಂದೆ ಘಟನೆ ನಡೆದಿರುತ್ತದೆ. ಆ ದಿನ ತಾವೆಲ್ಲರೂ ಚಾಸಾ 17 ರವರ ಜಮಿನಿನಲ್ಲಿ ಕಬ್ಬು

ಕಟಾವು ಕೆಲಸ ಮಾಡುತ್ತಿದ್ದೆವು. ತಮಗೆ ಚಾಸಾ 2 ಕಿರುಚಿದ ಶಬ್ದ ಕೇಳಿಸಿತು. ತಾವು ಸ್ಥಳಕ್ಕೆ ಹೋಗಿ ನೋಡಿದಾಗ ಮೃತಳು ಕೆಳಗೆ ಬಿದಿದ್ದಳು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 13: ಪ್ರಾ.ಸಾಕ್ಷಿ–5 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತ ಪವಿತ್ರಾ, ಚಾಸಾ 2 ಮತ್ತು 3 ರವರು ಶೌಚಾಲಯಕ್ಕೆಂದು ಸದರಿ ಸ್ಥಳಕ್ಕೆ ಹೋಗಿದ್ದರು. ಸದರಿ ಸ್ಥಳದಲ್ಲಿ ಜೋಳದ ಬೆಳೆ ಇದ್ದು, ಸುತ್ತಲೂ ಗೂಟಗಳನ್ನು ನೆಟ್ಟಿ ತಂತಿ ಬೇಲಿ ಹಾಕಿದ್ದರು. ಶೌಚಾಲಯಕ್ಕೆಂದು ಸದರಿ ಸ್ಥಳಕ್ಕೆ ಹೋಗಬೇಕಾಗಿರುತ್ತದೆ. ಮೃತಳನ್ನು ದೊಣ್ಣೆ ಮೂಲಕ ಪಕ್ಕಕ್ಕೆ ಸರಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಆಕೆ ಮೃತಪಟ್ಟಿದ್ದಾಳೆ ಎಂದು ಹೇಳಿದರು. ಚಾಸಾ 2 ರವರಿಗೂ ಸಹಾ ವಿದ್ಯುತ್ ಶಾಕ್ ಆಗಿರುತ್ತದೆ. ಜೋಳದ ಬೆಳೆ ಇದ್ದ ಮತ್ತು ತಂತಿ ಬೇಲಿ ಹಾಕಿದ್ದ ಸ್ಥಳ ಆರೋಪಿಗೆ ಸೇರಿತ್ತು. ತಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ತಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 14: ಪ್ರಾ.ಸಾಕ್ಷಿ–6 ಮಹೇಶ್ ತಮ್ಮ ಸಾಕ್ಷ್ಯದಲ್ಲಿ ತಾನು ಚಾಸಾ 18 ರವರ ಜಮೀನನ್ನು ಗುತ್ತಿಗೆಗೆ ಪಡೆದು ಕಬ್ಬಿನ ಬೆಳೆ ಬೆಳೆದಿದ್ದೆ. ಸದರಿ ಜಮೀನು ಆರುವನಪುರದಲ್ಲಿ ಇರುತ್ತದೆ. ಕಬ್ಬು ಬೆಳೆ ಕಟಾವು ಮಾಡಲು ಚಾಸಾ 4 ರವರಿಗೆ ವಹಿಸಿದ್ದೆ. ದಿಃ 15.12.2024 ರಂದು ಚಾಸಾ 4 ರವರು ಕಬ್ಬು ಬೆಳೆ ಕಟಾವನ್ನು ಪ್ರಾರಂಭಿಸಿದರು. 4 ಜನ ಹೆಂಗಸರು, 8 ಜನ ಗಂಡಸರು ಕಬ್ಬು ಬೆಳೆ ಕಟಾವಿಗೆ ಬಂದಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 15: ಪ್ರಾ.ಸಾಕ್ಷಿ–6 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 16.12.2024 ರಂದು ಚಾಸಾ 4 ರವರು ತನಗೆ ದೂರವಾಣಿ ಕರೆ ಮಾಡಿ ಕಬ್ಬು ಬೆಳೆ ಕಟಾವಿಗೆ ಬಂದಿದ್ದ ಒಬ್ಬ ಕೆಲಸಗಾರರಿಗೆ ವಿದ್ಯುತ್ ಶಾಕ್ ಆಗಿದೆ ಎಂದು ತಿಳಿಸಿದರು. ತಾನು ತಕ್ಷಣ ಜಮೀನಿನ ಬಳಿ ಹೋದೆ. ಅಲ್ಲಿ ಯಾರು ಇರಲಿಲ್ಲ. ನಂತರ ಚಾಸಾ 4 ರವರನ್ನು ವಿಚಾರಿಸಿದೆ. ಅವರು ಆಸ್ಪತ್ರೆಗೆ ದಾಖಲು ಮಾಡಿದ್ದೇನೆ ಎಂದು ತಿಳಿಸಿದರು. ದಾಖಲಾದ ವ್ಯಕ್ತಿ ಮೃತ ಪವಿತ್ರ ಆಗಿದ್ದರು. ಆಕೆ ಮೃತಪಟ್ಟಿದ್ದಾಳೆ ಎಂದು ತಿಳಿಸಿದರು. ತನ್ನ ಜಮೀನಿನ ಪಕ್ಕ ಆರೋಪಿಯ ಜಮೀನು ಇರುತ್ತದೆ. ಆರೋಪಿ ಜೋಳದ ಬೆಳೆ ಬೆಳೆದಿದ್ದನು. ಜಮೀನಿನ ಸುತ್ತ ಮುಳ್ಳಿನ ತಂತಿ ಬೇಲಿ

ಹಾಕಿದ್ದನು. ತಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ತಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 16: ಫ್ರಾ.ಸಾಕ್ಷಿ-7 ಗುರುಸ್ವಾಮಿ ತಮ್ಮ ಸಾಕ್ಷ್ಯದಲ್ಲಿ ಸುಮಾರು 1 ವರ್ಷದ ಹಿಂದೆ ಪವಿತ್ರಾ ಮೃತಪಟ್ಟಿರುತ್ತಾರೆ. ಚಾಸಾ 1 ರವರು ತನ್ನ ಬಳಿ ಬಂದು ತನಗೆ ಬರೆಯಲು ಬರುವುದಿಲ್ಲ, ಒಂದು ಪಿರ್ಯಾದಿಯನ್ನು ಬರೆದುಕೊಡು ಎಂದು ಕೇಳಿದರು. ತಾನು ಚಾಸಾ 1 ಹೇಳಿದಂತೆ ಪಿರ್ಯಾದಿ ವಿಚಾರಗಳನ್ನು ಬರೆದಿರುತ್ತೇನೆ. ಚಾಸಾ 1 ರವರು ಮೃತಳು ಕೂಲಿ ಕೆಲಸಕ್ಕೆ ಹೋದಾಗ ಆಕೆ ಮೂತ್ರ ವಿಸರ್ಜನೆಗೆಂದು ಹೋದಾಗ ವಿದ್ಯುತ್ ಸಂಪರ್ಕದಿಂದ ಮೃತಪಟ್ಟಿದ್ದಾಳೆ, ಎಂದು ತನಗೆ ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 17: ಫ್ರಾ.ಸಾಕ್ಷಿ-8 ಎನ್. ಸುರೇಂದ್ರಕುಮಾರ್, ಸ.ಇ. ಲೋಕೋಪಯೋಗಿ ಇಲಾಖೆ ತಮ್ಮ ಸಾಕ್ಷ್ಯದಲ್ಲಿ ದಿನಾಂಕ 17.4.2025 ರಂದು ಚಾಸಾ 46 ರವರು ತೋರಿಸಿದ ಸ್ಥಳದಲ್ಲಿ ಅಂದರೆ ಹಾರವನಪುರ ಗ್ರಾಮದ ಜಮೀನಿನಲ್ಲಿ ಸ್ಥಳ ಪರಿಶೀಲಿಸಿ ನಕಾಶೆ ತಯಾರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 18: ಫ್ರಾ.ಸಾಕ್ಷಿ-9 ಎಸ್. ಶ್ಯಾಮಸುಂದರ್, ಜಂಟಿ ನಿರ್ದೇಶಕರು, ಕೇಂದ್ರ ವಿದ್ಯುತ್ ಸಂಶೋಧನಾ ಸಂಸ್ಥೆ, ತಮ್ಮ ಸಾಕ್ಷ್ಯದಲ್ಲಿ ತಾನು ಕೊಳ್ಳೇಗಾಲ ಗ್ರಾಮಾಂತರ ಪೊಲೀಸರು ಕಳುಹಿಸಿದ ಜಿಂಕ್ ಕೋಟೆಡ್ ಜಿಐ ವೈರ್, ಇನ್ಸುಲೇಟೆಡ್ ಅಲುಮಿನಮ್ ವೈರ್ ಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸಿದ್ದೇನೆ. ತನ್ನ ಅಭಿಪ್ರಾಯದಲ್ಲಿ ಸದರಿ ಕಂಡಕ್ಟರ್ ಗಳು (ವಿದ್ಯುತ್ ತಂತಿ) ವಿದ್ಯುತ್ ಸರಬರಾಜಿನ ಸಂಪರ್ಕಕ್ಕೆ ಬಂದರೆ, ಅದು ವಿದ್ಯುಚ್ಛಕ್ತಿಯನ್ನು ನಡೆಸುತ್ತದೆ ಮತ್ತು ಬೇರ್ ಕಂಡಕ್ಟರ್ನೊಂದಿಗೆ ಸಂಪರ್ಕಕ್ಕೆ ಬಂದ ಯಾವುದೇ ಜೀವಿಯು ವಿದ್ಯುತ್ ಆಘಾತಕ್ಕೆ ಒಳಗಾಗಬಹುದು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 19: ಪ್ರಾ.ಸಾಕ್ಷಿ-10 ಬಸವಶೆಟ್ಟಿ ತಮ್ಮ ಸಾಕ್ಷ್ಯದಲ್ಲಿ ತನಗೆ ಮಧುವನಹಳ್ಳಿ ಗ್ರಾಮದಲ್ಲಿ ಸ.ನಂ 99/ಬಿ ನಲ್ಲಿ 62 ಸೆಂಟ್ ಜಮೀನು ಇರುತ್ತದೆ. ಸದರಿ ಜಮೀನನ್ನು ತನ್ನ ತಾಯಿ ಮಹಾದೇವಶೆಟ್ಟಿ ಎಂಬುವವರಿಂದ ಖರೀದಿ ಮಾಡಿದ್ದರು. ಸದರಿ ಜಮೀನಿನ ಪಹಣಿ ತನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಹಾಲಿ ಸದರಿ ಜಮೀನು ತನ್ನ ಸ್ವಾಧೀನಲದಲ್ಲಿರುತ್ತದೆ. ತಾನು ಸದರಿ ಜಮೀನನ್ನು ಕಳೆದ 3 ವರ್ಷಗಳಿಂದ ಚಾಸಾ 17 ರವರಿಗೆ ಗುತ್ತಿಗೆ ಆಧಾರದ ಮೇಲೆ ವ್ಯವಸಾಯ ಮಾಡಲು ನೀಡಿರುತ್ತೇನೆ. ಚಾಸಾ 17 ರವರು ಸದರಿ ಜಮೀನಿನಲ್ಲಿ ಜೋಳ ಮತ್ತು ಕಬ್ಬು ಬೆಳೆಯುತ್ತಿದ್ದರು. ತನ್ನ ಜಮೀನಿನ ಪಕ್ಕದಲ್ಲಿ ಆರೋಪಿಯ ಜಮೀನು ಇರುತ್ತದೆ. ಕಬ್ಬು ಕತ್ತರಿಸಲು ಬಂದ ಒಬ್ಬ ಮಹಿಳೆ ಮೃತಪಟ್ಟಿದ್ದಾಳೆ ಎಂಬ ವಿಚಾರ ಗೊತ್ತಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 20: ಪ್ರಾ.ಸಾಕ್ಷಿ-11 ಸಪೂನಾ ಪಿ, ಉಪವಿದ್ಯುತ್ ಪರಿವೀಕ್ಷಕರು, ಚಾ.ನಗರ, ತಮ್ಮ ಸಾಕ್ಷ್ಯದಲ್ಲಿ ದಿಃ 17.12.2024 ರಂದು ಚೆಸ್ಕಾಂ ಕೊಳ್ಳೇಗಾಲ ಉಪವಿಭಾಗದಿಂದ ದೂರವಾಣಿ ಮೂಲಕ ಬಂದ ಮನವಿ ಮೇರೆಗೆ ಅದೇ ದಿನ ತಾನು ಘಟನಾ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ. ಘಟನಾ ಸ್ಥಳವು ಆರೋಪಿಗೆ ಸೇರಿದ ಜಮೀನು ಆಗಿರುತ್ತದೆ. ಚಾಸಾ 31 ರವರು ತನಗೆ ಸ್ಥಳ ತೋರಿಸಿದರು. ತಾನು ಸ್ಥಳವನ್ನು ಪರಿಶೀಲನೆ ಮಾಡಲಾಗಿ, ಸದರಿ ಸ್ಥಳದಲ್ಲಿ ಜೋಳದ ಬೆಳೆಯ ಸಂರಕ್ಷಣೆಗಾಗಿ ತಂತಿ ಬೇಲಿಯನ್ನು ಅಳವಡಿಸಲಾಗಿತ್ತು. ಘಟನಾ ಸ್ಥಳದಲ್ಲಿ ವಿದ್ಯುತ್ ಸಂಪರ್ಕದಿಂದ ಉಂಟಾಗಬಹುದಾದ ಸುಟ್ಟ ಕಲೆಗಳು ಕಂಡು ಬಂದವು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 21: ಪ್ರಾ.ಸಾಕ್ಷಿ-11 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಘಟನಾ ಸ್ಥಳದಿಂದ 200 ಮೀ. ಅಂತರದಲ್ಲಿ ಒಂದು ವಿದ್ಯುತ್ ಪ್ಯಾನಲ್ ಮೀಟರ್ ಇತ್ತು. ಸದರಿ ಪ್ಯಾನಲ್ ಮೀಟರಿನಿಂದ ಒಂದು ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ಸದರಿ ಸ್ಥಳದಿಂದ ಅಲ್ಲಲ್ಲಿ ಮರದ ಗೂಟಗಳನ್ನು ನೆಡಲಾಗಿತ್ತು. ಸದರಿ ಪ್ಯಾನಲ್ ಮೀಟರಿನಿಂದ ಮೇಲೆ ಹೇಳಿದ ಬೇಲಿಗೆ ವಿದ್ಯುತ್ ಸಂಪರ್ಕ ಪಡೆಯಲಾಗಿತ್ತು ಎಂದು ತಾವು ಅದನ್ನು ತೆಗೆದಿದ್ದೇವೆ ಎಂದು ಚಾಸಾ 31 ಮತ್ತು ಪೋಲಿಸರು ತಿಳಿಸಿದರು. ಈ ಬಗ್ಗೆ ತಾನು ಒಂದು ವರದಿಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 22: ಪ್ರಾ.ಸಾಕ್ಷಿ–12 ಎಂ. ರಾಜು, ಸ.ಕಾ.ಇ, ಬೆಸ್ಕಾಂ ತಮ್ಮ ಸಾಕ್ಷ್ಯದಲ್ಲಿ ದಿಃ 16.12.2024 ರಂದು ತಾನು ಮತ್ತು ಚಾಸಾ 31 ರವರು ಮಧುವನಹಳ್ಳಿಯ ಮಸಣಶೆಟ್ಟಿ ಎಂಬುವವರ ಜಮೀನಿಗೆ ಭೇಟಿ ನೀಡಿದ್ದೇವು. ಸದರಿ ಸ್ಥಳದಲ್ಲಿ ವಿದ್ಯುತ್ ಸಂಪರ್ಕದಿಂದ ಒಬ್ಬ ವ್ಯಕ್ತಿ ಮೃತಪಟ್ಟಿದ್ದಳು. ಸದರಿ ಮಸಣಶೆಟ್ಟಿಯವರು ತಮ್ಮ ಜಮೀನಿನ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಪಡೆದಿದ್ದರು. ಸದರಿ ವಿದ್ಯುತ್ ಸಂಪರ್ಕದ ಸ್ಥಳದಲ್ಲಿ ಅಲ್ಲಲ್ಲಿ ಗೂಟಗಳನ್ನು ನೆಡಲಾಗಿತ್ತು. ಜಮೀನಿನ ಸುತ್ತ ತಂತಿ ಬೇಲಿಯನ್ನು ಹಾಕಲಾಗಿತ್ತು. ಸದರಿ ತಂತಿ ಬೇಲಿಗೆ ಮೇಲೆ ಹೇಳಿದ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ನೀಡಿದ ಮೀಟರ್ ಬೊರ್ಡಿನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ವಿದ್ಯುತ್ ವೈರಿನಿಂದ ತಂತಿ ಬೇಲಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ತಾನು ಸ್ಥಳವನ್ನು ಪರಿಶೀಲಿಸಿ ನಕಾಶೆಯನ್ನು ತಯಾರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 23: ಪ್ರಾ.ಸಾಕ್ಷಿ–12 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 15.12.2024 ರ ರಾತ್ರಿ 10.00 ಗಂಟೆಯಿಂದ ದಿಃ 16.12.2024ರ ಬೆಳಗ್ಗೆ 7.00 ಗಂಟೆಯವರಗೆ ಸದರಿ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಇರುವ ಬಗ್ಗೆ ಮಾಹಿತಿ ಕೇಳಿದ್ದರು. ಸದರಿ ಸಮಯದಲ್ಲಿ ನಿರಂತರ ವಿದ್ಯುತ್ ಸಂಪರ್ಕ ಇತ್ತು ಎಂದು ತಾನು ತನಿಖಾಧಿಕಾರಿಗಳಿಗೆ ಮಾಹಿತಿ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 24: ಪ್ರಾ.ಸಾಕ್ಷಿ–13 ಎನ್. ರಂಗಸ್ವಾಮಿ, ರಾಜಸ್ವ ನಿರೀಕ್ಷಕರು, ತಮ್ಮ ಸಾಕ್ಷ್ಯದಲ್ಲಿ ಪೋಲಿಸರು ಪಾಳ್ಯ ಹೋಬಳಿ, ಆರವನಪುರ ಗ್ರಾಮದ ಸ.ನಂ 99ಬಿ ಗೆ ಸಂಬಂಧಿಸಿದಂತೆ ಕಂದಾಯ ದಾಖಲಾತಿಯನ್ನು ಕೇಳಿದ್ದರು. ಅದರಂತೆ ತಾನು ಗ್ರಾಮ ಆಡಳಿತ ಅಧಿಕಾರಿಯವರನ್ನು ಸ್ಥಳ ಪರಿಶೀಲನೆ ಮಾಡಿ ವರದಿ ಕೊಡುವಂತೆ ಕೇಳಿದ್ದೆ. ಗ್ರಾಮ ಆಡಳಿತ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ನೀಡಿದ ವರದಿಯಂತೆ ಸದರಿ ಸ.ನಂ ಮಸಣಶೆಟ್ಟಿ ಎಂಬುವವರಿಗೆ ಸೇರಿರುತ್ತದೆ. ಸದರಿ ಮಸಣಶೆಟ್ಟಿ ಮೃತಪಟ್ಟಿರುತ್ತಾರೆ. ಆರೋಪಿಯು ಸದರಿ ಮಸಣಶೆಟ್ಟಿ ಎಂಬುವವರ ವಾರಸ್ಸುದಾರನಾಗಿರುತ್ತಾನೆ. ಆರೋಪಿಯು ಸದರಿ ಜಮೀನಿನ ಸ್ವಾಧೀನವನ್ನು ತೆಗೆದುಕೊಂಡು ವ್ಯವಸಾಯ ಮಾಡುತ್ತಿದ್ದನು. ಈ ಬಗ್ಗೆ ತಾನು ಒಂದು ವರದಿಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 25: ಫ್ರಾ.ಸಾಕ್ಷಿ–14 ಶ್ರೀಕಂಠ ತಮ್ಮ ಸಾಕ್ಷ್ಯದಲ್ಲಿ ಸುಮಾರು 1 ವರ್ಷದ ಹಿಂದೆ ಚಾಸಾ 4 ರವರು ತಮ್ಮನ್ನು ಮೃತ ಪವಿತ್ರಾ ರವರನ್ನು ಕೂಲಿ ಕೆಲಸಕ್ಕೆಂದು ಚಾಸಾ 17 ರವರ ಜಮೀನಿಗೆ ಕಬ್ಬು ಕಟಾವಿಗೆಂದು ಕರೆದುಕೊಂಡು ಬಂದಿದ್ದರು. ಮೊದಲನೇ ದಿನ ತಾವು ಕೆಲಸ ಮುಗಿಸಿ ಹೋಗಿದ್ದೆವು. ಮರುದಿನ ಬೆಳಗ್ಗೆ 5.00 ಗಂಟೆಗೆ ಸದರಿ ಜಮೀನಿನ ಬಳಿ ತಾವೆಲ್ಲರೂ ಬಂದಿದ್ದೆವು . ಮೃತ ಪವಿತ್ರಾರವರು ಮತ್ತು ಚಾಸಾ 3 ರವರು ಪ್ರಕೃತಿ ಕರೆಗೆಂದು ತಾವು ಕೆಲಸ ಮಾಡುತ್ತಿದ್ದ ಜಮೀನಿನ ಪಕ್ಕದ ಜಮೀನಿನ ಬಳಿ ಹೋದರು. ಸದರಿ ಜಮೀನಿನಲ್ಲಿ ಗೂಟಗಳನ್ನು ನೆಟ್ಟ ತಂತಿ ಬಿಟ್ಟಿದ್ದರು. ಮೊದಲು ಚಾಸಾ 3 ರವರು ಕಿರುಚಿಕೊಂಡರು. ಮೃತ ಪವಿತ್ರಾಳಿಗೆ ವಿದ್ಯುತ್ ಸಂಪರ್ಕದಿಂದ ಶಾಕ್ ಹೊಡೆದು ಸ್ಥಳದಲ್ಲೇ ಬಿದ್ದಿದ್ದಳು. ನಂತರ ತಾವು ಮೃತಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ವೈದ್ಯರು ಆಕೆ ಮೃತಪಟ್ಟಿದ್ದಾಳೆ ಎಂದು ಹೇಳಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 26: ಫ್ರಾ.ಸಾಕ್ಷಿ–14 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಘಟನೆ ಆದ ಮರುದಿನ ಪೋಲಿಸರು ತನ್ನನ್ನು ಸ್ಥಳಕ್ಕೆ ಕರೆಸಿದರು. ಪೋಲಿಸರು ಜೊತೆ ಆರೋಪಿ ಇದ್ದನು. ತಾವು ಆ ದಿನ ಕಟಾವು ಮಾಡುತ್ತಿದ್ದ ಜಮೀನಿನ ಸುಮಾರು 100 ಮೀ. ಅಂತರದಲ್ಲಿ ಆರೋಪಿಯ ಜಮೀನು ಇತ್ತು. ಆರೋಪಿಯು ತನ್ನ ಜಮಿನಿನಲ್ಲಿ ಜೋಳ ಬೆಳೆದಿದ್ದನು. ಆರೋಪಿಯು ಜಮೀನಿಗೆ ತಂತಿ ಬೇಲಿ ಹಾಕಿ ಸದರಿ ಬೇಲಿಗೆ ವಿದ್ಯುತ್ ಸಂಪರ್ಕ ನೀಡಿದ್ದನು. ಪೋಲಿಸರು ಆರೋಪಿಯು ವಿದ್ಯುತ್ ಸಂಪರ್ಕಕ್ಕೆ ಬಳಸಿದ್ದ ವೈರನ್ನು ಅಮಾನತ್ತುಪಡಿಸಿಕೊಂಡರು. ತಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ನಂತರ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 27: ಫ್ರಾ.ಸಾಕ್ಷಿ–15 ವಿಜಯ್ ಕುಮಾರ್, ಪೊಲೀಸ್ ಪೇದೆ, ತಮ್ಮ ಸಾಕ್ಷ್ಯದಲ್ಲಿ ದಿಃ 17.12.2024 ರಂದು ಚಾಸಾ 48 ರವರು ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದು, ಸದರಿ ಮಹಜರ್ ಅನ್ನು ತಾನು ಬೆರಳಚ್ಚು ಮಾಡಿರುತ್ತೇನೆ. ಚಾಸಾ 48 ರವರು ಮಹಜರ್ ಸಮಯದಲ್ಲಿ ಮು.ಮಾ 1 ಜಿಂಕ್ ವೈರ್ ಮತ್ತು ಮು.ಮಾ. 2 ದೊಣ್ಣೆಗಳನ್ನು ವಶಪಡಿಸಿಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆ: 28: ಪ್ರಾ.ಸಾಕ್ಷಿ–15 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಚಾಸಾ 49 ರವರು ಆರೋಪಿಯು ತೋರಿಸಿದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದು ಮತ್ತು ಆರೋಪಿಯಿಂದ ಮು.ಮಾ 3 ರಿಂದ 7 ತಂತಿಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ತಾನು ಆ ಸಮಯದಲ್ಲಿ ವೀಡಿಯೋ ಚಿತ್ರೀಕರಣವನ್ನು ಠಾಣೆಯ ಕ್ಯಾಮೇರಾದ ಮೂಲಕ ಮಾಡಿರುತ್ತೇನೆ. ವೀಡಿಯೋ ಚಿತ್ರೀಕರಣವನ್ನು ಠಾಣೆಯ ಕಂಪ್ಯೂಟರ್ ಮೂಲಕ ಡಿವಿಡಿಗೆ ವರ್ಗಾಯಿಸಿರುತ್ತೇನೆ. ಈ ಸಂಬಂಧ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4)(ಸಿ) ರೀತ್ಯಾ ದೃಡೀಕರಣವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರ:

ಪ್ರಶ್ನೆ: 29: ಪ್ರಾ.ಸಾಕ್ಷಿ–16 ಮನೋಹರ, ಪೊಲೀಸ್ ಪೇದೆ ತಮ್ಮ ಸಾಕ್ಷ್ಯದಲ್ಲಿ ದಿಃ 16.12.2024 ರಂದು ತನಿಖಾಧಿಕಾರಿಗಳ ಆದೇಶದಂತೆ ಚಾಮರಾಜನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಮೃತ ಪವಿತ್ರಳ ಶವ ತನಿಖಾ ಸಮಯದಲ್ಲಿ ತನ್ನ ಮೊಬೈಲ್ ಮೂಲಕ ಭಾವಚಿತ್ರಗಳನ್ನು ತೆಗೆದು ವೀಡಿಯೋ ಚಿತ್ರೀಕರಣವನ್ನು ಮಾಡಿರುತ್ತೇನೆ. ದಿಃ 17.12.2024 ರಂದು ತನಿಖಾಧಿಕಾರಿಗಳು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿದ್ದು, ಆ ಸಮಯದಲ್ಲಿ ತನ್ನ ಮೊಬೈಲ್ ಮೂಲಕ ಭಾವಚಿತ್ರಗಳನ್ನು ತೆಗೆದು ವೀಡಿಯೋ ಚಿತ್ರೀಕರಣವನ್ನು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರ:

ಪ್ರಶ್ನೆ: 30: ಪ್ರಾ.ಸಾಕ್ಷಿ–16 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ವಿಡಿಯೋ ದೃಶ್ಯಾವಳಿಗಳನ್ನು ಮತ್ತು ಭಾವಚಿತ್ರಗಳನ್ನು ಠಾಣಾ ಕಂಪ್ಯೂಟರ್ ಗೆ ವರ್ಗಾಯಿಸಿ ನಂತರ ಡಿವಿಡಿಗೆ ವರ್ಗಾಯಿಸಿರುತ್ತೇನೆ. ಈ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63 9(4)(ಸಿ) ರಂತೆ ದೃಡೀಕರಣವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರ:

ಪ್ರಶ್ನೆ: 31: ಪ್ರಾ.ಸಾಕ್ಷಿ–17 ಸುಪ್ರಿತ್ ಎ.ಎಸ್., ಪಿಎಸ್ಐ ತಮ್ಮ ಸಾಕ್ಷ್ಯದಲ್ಲಿ ದಿಃ 16.12.2024 ರಂದು ಬೆಳಿಗ್ಗೆ 9.30 ರ ಸಮಯದಲ್ಲಿ ತಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪಿರ್ಯಾದಿಯನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 247/2024 ರಲ್ಲಿ

ಪ್ರಕರಣವನ್ನು ನೊಂದಾಯಿಸಿರುತ್ತೇನೆ. ಅದೇ ದಿನ ಚಾಸಾ 49 ರವರ ಆದೇಶದಂತೆ ಪಂಚರಾದ ಚಾಸಾ 20 ರಿಂದ 22 ರವರ ಸಮಕ್ಷಮ ಮಧ್ಯಾಹ್ನ 1.30 ರಿಂದ 3.30 ರವರೆಗೆ ಚಾ.ನಗರ ಜಿಲ್ಲಾ ಆಸ್ಪತ್ರೆಯಲ್ಲಿ ಮೃತ ಪವಿತ್ರಾಳ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದೇ ದಿನ ಮೃತಳ ಶವವನ್ನು ವೈದ್ಯಕೀಯ ಪರೀಕ್ಷೆಗೆಂದು ಮನವಿ ಮಾಡಿರುತ್ತೇನೆ. ಮೃತಳ ಶವವನ್ನು ವಾರಸ್ಸುದಾರರಿಗೆ ನೀಡಿದ ಬಗ್ಗೆ ಚಾಸಾ 43 ರವರಿಂದ ಸ್ವೀಕೃತಿಯನ್ನು ಪಡೆದಿರುತ್ತೇನೆ. ಅದೇ ದಿನ ವಿಧ್ಯುತ್ ಪರಿವೀಕ್ಷಕರಿಗೆ ಸ್ಥಳ ಪರಿಶೀಲನಾ ವರದಿ ನೀಡಲು ಮನವಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 32: ಪ್ರಾ.ಸಾಕ್ಷಿ– 17 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 17.12.2024 ರಂದು ಬೆಳಗ್ಗೆ 7.00–9.00 ಗಂಟೆ ಸಮಯದಲ್ಲಿ ಪಂಚರಾದ ಚಾಸಾ 7 ಮತ್ತು 14 ರವರ ಸಮಕ್ಷಮ ಚಾಸಾ 2 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ತಾನು ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಸುಮಾರು 300 ಅಡಿ ಉದ್ದದ ತಂತಿಯನ್ನು ಮತ್ತು 92 ಕಾಡು ಮರದ ತುಂಡುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ 49 ರವರು ವಹಿಸಿಕೊಂಡಿರುತ್ತಾರೆ. ಶವ ಪಂಚನಾಮೆಯ ಸಮಯದಲ್ಲಿ ಭಾವಚಿತ್ರವನ್ನು ತೆಗೆದ ಬಮತ್ತು ಚಿತ್ರೀಕರಣ ಮಾಡಿದ ಸಂಬಂಧ ಚಾಸಾ 44 ರವರಿಂದ ಭಾರತೀಂಯ ಸಾಕ್ಷಿ ಅಧಿನಿಯಮ ಕಲಂ 63(4)(ಸಿ) ರಂತೆ ದೃಢಿಕರಣವನ್ನು ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 33: ಪ್ರಾ.ಸಾಕ್ಷಿ– 18 ಶಿವಮಾದಯ್ಯ, ಆರಕ್ಷಕ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ದಿಃ 17.12.2024 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ 48 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಆರೋಪಿಯ ಪತ್ತೆಗಾಗಿ ಮತ್ತು ಪ್ರಕರಣದ ತನಿಖೆಯನ್ನು ಮುಂದುವರೆಸಲು ಚಾಸಾ 48ರ ವರಿಗೆ ಮೌಖಿಕವಾಗಿ ಆದೇಶ ಮಾಡಿರುತ್ತೇನೆ. ಚಾಸಾ 39 ಮತ್ತು 40 ರವರು ಆರೋಪಿಯನ್ನು ಪತ್ತೆ ಮಾಡಿ ಬೆಳಗ್ಗೆ 9.45 ಕ್ಕೆ ತನ್ನ ಮುಂದೆ ಹಾಜರುಪಡಿಸಿದ್ದು, ತಾನು ಆರೋಪಿಯನ್ನು ವಿಚಾರಣೆ ಮಾಡಿ ಆತನ ಸ್ವ ಇಚ್ಚೆ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ನಂತರ ಆರೋಪಿಯ ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 34: ಪ್ರಾ.ಸಾಕ್ಷಿ– 18 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯು ಕೃತ್ಯ ಸ್ಥಳವನ್ನು ತೋರಿಸುವುದಾಗಿ ಹೇಳಿಕೆ ನೀಡಿದ್ದು, ಪಂಚರಾಗಿ ಚಾಸಾ 6 ಮತ್ತು 10 ರವರನ್ನು ಬರಮಾಡಿಕೊಂಡು ಸದರಿ ಪಂಚರ ಸಮಕ್ಷಮ ಆರೋಪಿ ತೋರಿಸಿದ ಘಟನಾ ಸ್ಥಳದಲ್ಲಿ ಮಹಜರ್ ಅನ್ನು ಬರೆದಿರುತ್ತೇನೆ. ನಂತರ ಆರೋಪಿಯು ತಾನು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಪಡೆದ ಸ್ಥಳ ಮತ್ತು ಸಂಪರ್ಕ ಪಡೆಯಲು ಉಪಯೋಗಿಸಿದ ತಂತಿಗಳನ್ನು ತೋರಿಸಿರುತ್ತಾನೆ. ಸದರಿ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿ ಆರೋಪಿ ತೋರಿಸಿದ 5 ತಂತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಮಹಜರ್ ಗಳನ್ನು ಬೆಳಗ್ಗೆ 11.30 ರಿಂದ ಮದ್ಯಾಹ್ನ 1.00 ಗಂಟೆಯವರೆಗೆ ಬರೆದಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 35: ಪ್ರಾ.ಸಾಕ್ಷಿ– 18 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದ ಚಾಸಾ 45 ರವರು ಭಾರತೀಯ ಸಾಕ್ಷಿ ಅಧಿನಿಯಮ ಕಲಂ 63(4)(ಸಿ) ರೀತಿ ದೃಢಿಕರಣವನ್ನು ಕೊಟ್ಟಿರುತ್ತಾರೆ. ದಿಃ 20.12.2024 ರಂದು ಕೃತ್ಯ ನಡೆದ ಸ್ಥಳದ ಪಹಣಿಯನ್ನು ನೀಡುವಂತೆ ಕಂದಾಯ ಇಲಾಖೆಗೆ ಮನವಿ ಸಲ್ಲಿಸಿರುತ್ತೇನೆ. ಸದರಿ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ಮತ್ತು ಸದರಿ ಸ್ಥಳದ ನಕಾಶೆಯನ್ನು ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ದಿನಾಂಕ 26.12.2024 ರಂದು ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಚಾಸಾ 33 ರವರ ಕಚೇರಿಗೆ ಮನವಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 36: ಪ್ರಾ.ಸಾಕ್ಷಿ– 18 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 03.01.2025 ರಂದು ಮೃತಳ ವಿಸರ ಮತ್ತು ಪಿ.ಎಂ ವರದಿಯನ್ನು ಮತ್ತು ಶವ ಪರೀಕ್ಷಾ ಸಮಯದಲ್ಲಿ ಮೃತಳಿಂದ ಸಂಗ್ರಹಿಸಿದ ವಸ್ತುಗಳನ್ನು ಪಡೆಯಲು ಚಾಸಾ 41 ರವರನ್ನು ನೇಮಿಸಿರುತ್ತೇನೆ. ಅದೇ ದಿನ ಚಾಸಾ 41 ರವರು ವೈದ್ಯರು ಸಂಗ್ರಹಿಸಿದ ವಸ್ತುಗಳನ್ನು ಮತ್ತು ಪಿ.ಎಂ ವರದಿಯನ್ನು ಹಾಜರುಪಡಿಸಿರುತ್ತಾರೆ. ವಸ್ತುಗಳ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ದಿಃ 06.01.2025 ರಂದು ಮೃತಳ ಬಾಬ್ತು

ವಿಸರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತೇನೆ. ಆ ಬಗ್ಗೆ ಚಾಸಾ 41 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 37: ಪ್ರಾ.ಸಾಕ್ಷಿ-18 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 10.01.2025 ರಂದು ಚಾಸಾ 2 ರಿಂದ 6 ಮತ್ತು 10 ರವರು ನ್ಯಾಯಾಲಯದ ಮುಂದೆ ಹೇಳಿಕೆಗಳನ್ನು ನೀಡಿರುತ್ತಾರೆ. ಅದೇ ದಿನ ಮೃತಳ ಬಾಬ್ತು ಎಂ.ಎಲ್.ಸಿ ಯನ್ನು ಆಸ್ಪತ್ರೆಯಿಂದ ಪಡೆದಿರುತ್ತೇನೆ. ದಿಃ 22.01.2025 ರಂದು ಚಾಸಾ 17 ರವರ ಹೇಳಿಕೆಯನ್ನು ಮಾಡಿಕೊಳ್ಳುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ. ದಿಃ 06.02.2025 ರಂದು ವಿಧಿವಿಜ್ಞಾನ ಪ್ರಯೋಗಾಲಯದಿಂದ ವರದಿಯನ್ನು ಪಡೆದಿರುತ್ತೇನೆ. ದಿಃ 18.02.2025 ರಂದು ಚಾ.ನಗರ ಜಿಲ್ಲಾ ಆಸ್ಪತ್ರೆಯಿಂದ ಪ್ರಯೋಗಾಲಯದ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 21.02.2025 ರಂದು ಚಾ.ನಗರ ಜಿಲ್ಲಾ ಆಸ್ಪತ್ರೆಗೆ ಸ್ಪಷ್ಟ ಅಭಿಪ್ರಾಯ ಕೋರಿ ಮನವಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 38: ಪ್ರಾ.ಸಾಕ್ಷಿ-18 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 28.02.2025 ರಂದು ಆಸ್ಪತ್ರೆಯಿಂದ ಅಂತಿಮ ಅಭಿಪ್ರಾಯವನ್ನು ಪಡೆದಿರುತ್ತೇನೆ. ದಿಃ 04.03.2025 ರಂದು ಘಟನಾ ಸ್ಥಳದ ಕಂದಾಯ ದಾಖಲಾತಿಯನ್ನು ಮತ್ತು ವರದಿಯನ್ನು ಪಡೆದಿರುತ್ತೇನೆ. ದಿಃ 28.03.2025 ರಂದು ಚಾಸಾ 33 ರವರಿಂದ ವರದಿಯನ್ನು ಪಡೆದಿರುತ್ತೇನೆ. ದಿಃ 02.05.2025 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಡೆದಿರುತ್ತೇನೆ. ದಿಃ 01.07.2025 ರಂದು ಚಾಸಾ 30 ರವರಿಂದ ಘಟನಾ ಸಮಯದಲ್ಲಿವಿದ್ಯುತ್ ಸಂಪರ್ಕ ಇದ್ದ ಬಗ್ಗೆ ವರದಿಯನ್ನು ಪಡೆದಿರುತ್ತೇನೆ. ದಿಃ 21.07.2025 ರಂದು ಚಾಸಾ 32 ರವರಿಂದ ವರದಿಯನ್ನು ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 39: ಪ್ರಾ.ಸಾಕ್ಷಿ-18 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 26.08.2025 ರಂದು ಚಾಸಾ 35 ಮತ್ತು ಅಧಿಕಾರಿಗಳಿಂದ ಕೃತ್ಯ ಸ್ಥಳದ ಬಗ್ಗೆ ವರದಿಯನ್ನು ಪಡೆದಿರುತ್ತೇನೆ. ಅದೇ ದಿನ ತನಿಖೆಯನ್ನು

ಪೂರ್ಣಗೊಳಿಸಿ ಆರೋಪಿತರ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿನ್ನ ಉತ್ತರವೇನು?

ಉತ್ತರಃ

ಪ್ರಶ್ನೆಃ 40: ನೀವು ಬೇರೆ ಯಾವುದಾದರೂ ವಿಷಯವನ್ನು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರಶ್ನೆಃ 41: ನೀವು ನಿಮ್ಮ ಪರವಾಗಿ ಬೇರೆ ಯಾವುದಾದರೂ ಮೌಖಿಕವಾಗಿ ಅಥವಾ ದಸ್ತಾವೇಜು ರೂಪದಲ್ಲಿ ಸಲ್ಲಿಸುವಂತಹ ಸಾಕ್ಷ್ಯಾಧಾರವೇನಾದರೂ ಇದೆಯೇ?

ಉತ್ತರಃ

(ಅಭಿಯೋಜನಾ ಪರ ಸಾಕ್ಷಿದಾರರು ನ್ಯಾಯಾಲಯದ ಮುಂದೆ ನುಡಿದ ಸಾಕ್ಷ್ಯವನ್ನು ಆರೋಪಿಗೆ ಓದಿ ಹೇಳಲಾಗಿ, ಅವರು ಅದನ್ನು ಅರ್ಥ ಮಾಡಿಕೊಂಡು ನೀಡಿದ ಉತ್ತರಗಳನ್ನು ಯಥಾ ಪ್ರಕಾರ ದಾಖಲಿಸಿದೆ ಎಂದು ಈ ಮೂಲಕ ನ್ಯಾಯಾಲಯ ದೃಢೀಕರಿಸುತ್ತದೆ.)

ದಿನಾಂಕ 23ನೇ ಜೂನ್ 2026.

(ಟಿ.ಸಿ. ಶ್ರೀಕಾಂತ್)
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)